# ಕರ್ನಾಟಕ ಪಬ್ಲಿಕ್ ಶಾಲೆಗಳು (KPS)

## ನಮ್ಮ ಮಕ್ಕಳ ಸಮಗ್ರ ಶಿಕ್ಷಣಕ್ಕಾಗಿ ನಮ್ಮ ಶಾಲೆ





– ಕೃಷ್ಣಜಿ ಕರಿಚಣ್ಣವರ್, ಸಹನಿರ್ದೇಶಕರು, ಎಸ್.ಎಸ್.ಕೆ. ಬೆಂಗಳೂರು

ಕರ್ನಾಟಕದಲ್ಲಿ ಕಳೆದ ಎರಡು ದಶಕಗಳಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ವ್ಯವಸ್ಥೆಯ ವಿಸ್ತಾರದೊಂದಿಗೆ ಪ್ರಾರಂಭಿಕ ಒಂದನೇ ತರಗತಿಯ ಔಪಚಾರಿಕ ಶಿಕ್ಷಣದಲ್ಲಿ ಸಾರ್ವತ್ರಿಕ ದಾಖಲಾತಿ ಇದೆ. ಅದಾಗ್ಯೂ ಉನ್ನತ ತರಗತಿಗಳಲ್ಲಿ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿದಿರುವುದು ಒಂದು ಸವಾಲಾಗಿದೆ. 2017–18 ರ ಅಂಕಿ ಅಂಶಗಳ ಅನುಸಾರ 1 ರಿಂದ 10 ನೇ ತರಗತಿಯವರೆಗೆ ಉಳಿಯುವಿಕೆಯ ದರ ಪ್ರಸ್ತುತ ಶೇ. 75 ಇದೆ. ಹೆಚ್ಚಿನ ಸಂಖ್ಯೆಯ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಡಿಮೆ ದಾಖಲಾತಿ ಮತ್ತೊಂದು ಸವಾಲಾಗಿದೆ. ಅಂದಾಜು 3 ನೇ ಒಂದು ಭಾಗ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 50 ಕ್ಕಿಂತ ಕಡಿಮೆ ದಾಖಲಾತಿ ಇದೆ. ಸರಕಾರಿ ಶಾಲೆಗಳಲ್ಲಿ ಎಸ್.ಸಿ., ಎಸ್.ಟಿ. ಮತ್ತು ಇತರ ಹಿಂದುಳಿದ ವರ್ಗಗಳ ಮಕ್ಕಳು, ಬಡವರ್ಗಗಳ ಹೆಚ್ಚಿನ ಸಂಖ್ಯೆಯ ಮಕ್ಕಳು ಪ್ರವೇಶ ಪಡೆದಿರುತ್ತಾರೆ.

ವಿದ್ಯಾರ್ಥಿಗಳು ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಹೀಗೆ ಪ್ರತಿ ಹಂತದಲ್ಲಿ ಔಪಚಾರಿಕ ಪ್ರವೇಶವನ್ನು ಪಡೆಯಬೇಕಾಗಿದೆ. ಈ ಸ್ಥಿತ್ಯಂತರದ ಹಂತದಲ್ಲಿ ಶಾಲೆಯಿಂದ ಹೊರಗುಳಿಯುವ ಸಾಧ್ಯತೆ ಇದೆ. ಜೊತೆಗೆ ಈ ರೀತಿಯ ಪ್ರತ್ಯೇಕ ಸಂಸ್ಥೆಗಳು ಇರುವುದರಿಂದ ಭೌತಿಕ ಹಾಗೂ ಶೈಕ್ಷಣಿಕ ಸಂಪನ್ಮೂಲಗಳ ಮತ್ತು ಮಾನವ ಸಂಪನ್ಮೂಲಗಳು ಗರಿಷ್ಠ ಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ. ಇವು ಗುಣಮಟ್ಟದ ಶಿಕ್ಷಣ ನೀಡುವುದರ ಮೇಲೆ ಪ್ರಭಾವ ಬೀರುತ್ತವೆ, ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯಲು ಶಿಕ್ಷಣದ ಗುಣಮಟ್ಟ ಒಂದು ಪ್ರಮುಖ ಕಾರಣವಾಗಿದೆ.

ಶಿಕ್ಷಕರು ಮತ್ತು ಇತರ ಸಂಪನ್ಮೂಲಗಳ ಬಳಕೆಯ ಸಮರ್ಪಕತೆಯನ್ನು ಸುಧಾರಿಸಲು ಗ್ರಾಮೀಣ ಪ್ರದೇಶದ ಸಣ್ಣ ಪ್ರಮಾಣದ ಪ್ರಾಥಮಿಕ ಶಾಲೆಗಳನ್ನು ಕ್ರೋಢೀಕರಿಸಲು ಕರ್ನಾಟಕ ಜ್ಞಾನ ಆಯೋಗ ಶಿಫಾರಸ್ಸು ಮಾಡಿದೆ. ಆಯೋಗವು 11 ಮತ್ತು 12 ನೇ ತರಗತಿಗಳು ಪ್ರೌಢ ಶಿಕ್ಷಣದ ಅಂತರ್ಗತ ಭಾಗವಾಗಿರಬೇಕೆಂದು ಶಿಫಾರಸ್ಸು ಮಾಡಿದೆ.

ಕರ್ನಾಟಕ ಸರ್ಕಾರ "ಪ್ರತಿ ಮಗುವೂ ಶಾಲೆಯಲ್ಲಿರಬೇಕು ಮತ್ತು ಚೆನ್ನಾಗಿ ಕಲಿಯಬೇಕು" ಎಂಬ ನೀತಿಯನ್ನು ಅಳವಡಿಸಿಕೊಂಡಿದೆ. ಈ ದೂರದೃಷ್ಟಿಯ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ E D 04 YOSAKA 2017 ದಿನಾಂಕ: 05–01–2018 ರಂತೆ ಒಂದೇ ಭೌಗೋಳಿಕ ಸ್ಥಳಗಳಲ್ಲಿ ಆಸ್ತಿತ್ವದಲ್ಲಿರುವ ಶಾಲೆಗಳನ್ನು ತಾಲ್ಲೂಕಿಗೆ ಒಂದರಂತೆ ಆಡಳಿತಾತ್ಮಕ, ಶೈಕ್ಷಣಿಕ ಮತ್ತು ಕ್ರಿಯಾತ್ಮಕ ಸಂಯೋಜನೆಯೊಂದಿಗೆ 176 ಸಮಗ್ರ ಶಾಲೆಗಳು: 'ಕರ್ನಾಟಕ ಪಬ್ಲಿಕ್ ಸ್ಕೂಲ್'ಗಳನ್ನು ಪ್ರಾರಂಭಿಸಲು ಸರ್ಕಾರ ತೀರ್ಮಾನಿಸಿನಿತು, ಇವುಗಳು ವರ್ಷ 2018–19 ರಲ್ಲಿ ಕಾರ್ಯಾಚರಣೆಗೊಂಡಿರುತ್ತವೆ. ರಾಜ್ಯ ಸರಕಾರದ ಈ ನಡೆಯು, ಕೇಂದ್ರ ಸರಕಾರವು ವರ್ಷ 2018–19 ರಿಂದ ಜಾರಿಗೆ ತಂದಿರುವ Integrated Scheme for School Education 'ಸಮಗ್ರಶಿಕ್ಷಣ' ದ ಪ್ರಮುಖ ಮಾರ್ಗಸೂಚಿಯಾದ: 'The scheme would, therefore attempt to provide, as far as possible, an integrated composite school system from Pre-school to Higher Secondary level' ಎಂಬುದರ ಅನುಸಾರವಾಗಿದೆ.

2018–19 ರಲ್ಲಿ ಪ್ರಾರಂಭಿಸಿರುವ 'ಕರ್ನಾಟಕ ಪಬ್ಲಿಕ್ ಸ್ಕೂಲ್'ಗಳಿಗೆ ಪಾಲಕರು, ವಿದ್ಯಾರ್ಥಿಗಳು, ಸಮುದಾಯ ಮತ್ತು ಚುನಾಯಿತ ಪ್ರತಿನಿಧಿಗಳಿಂದ ಉತ್ತಮ ಪ್ರತಿಕ್ರಿಯೆ ಮತ್ತು ಬೆಂಬಲ ವ್ಯಕ್ತವಾಗಿದೆ. ಈ ಅಂಶವನ್ನು ಪರಿಗಣಿಸಿ ರಾಜ್ಯ ಸರಕಾರವು ನಾಲ್ಕು ವರ್ಷಗಳಲ್ಲಿ ಹಂತಹಂತವಾಗಿ ಪೂರ್ವ ಪ್ರಾಥಮಿಕ ದಿಂದ 12 ನೇ ತರಗತಿವರೆಗೆ ಶಿಕ್ಷಣ ನೀಡುವ ಒಟ್ಟು 1000 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲು ತೀರ್ಮಾನಿಸಿದೆ ಹಾಗೂ 2019–20 ರಲ್ಲಿ 100 ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲು ಆದೇಶ ಹೊರಡಿಸಿರುತ್ತದೆ. ಎಲ್ಲ 276 ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳ ಜೊತೆಗೆ ಒಂದನೇ ತರಗತಿಗೆ ಕನ್ನಡ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ ವಿಭಾಗವನ್ನೂ ಪ್ರಾರಂಭಿಸಲಾಗುತ್ತಿದೆ.

ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳು ಗುಣಮಟ್ಟದ ಶಿಕ್ಷಣ ನೀಡುವ, ವಿದ್ಯಾರ್ಥಿಕೇಂದ್ರಿತ, ಸಮುದಾಯ ಮುಖಿ ಮತ್ತು ಸಮುದಾಯ ಬೆಂಬಲಿತ ಶಾಲೆಗಳಾಗಬೇಕು. ಇವುಗಳು **'ಉತ್ಕೃಷ್ಟತೆಯ ಕೇಂದ್ರಗಳು'** (Centres of Excellence) ಆಗುತ್ತವೆ.

ಈ ಮೇಲಿನ ಧ್ಯೇಯ ಮತ್ತು ಕಾಣ್ಕೆಗಳು ಸಾಕಾರಗೊಳ್ಳಬೇಕಾದರೆ

ಕೇವಲ ಶಾಲೆಗಳ ಭೌತಿಕ ಕ್ರೊಡೀಕರಣ ಮಾತ್ರ ಆದರೆ ಸಾಲದು, ಬದಲಾಗಿ ಆಡಳಿತಾತ್ಮಕ, ಕ್ರಿಯಾತ್ಮಕ ಮತ್ತು ಶೈಕ್ಷಣಿಕ ಕ್ರೋಡೀಕರಣ ಆಗುವುದು ಅವಶ್ಯವಿದೆ. ಪ್ರತಿಯೊಂದು ಕೆ.ಪಿ.ಎಸ್. ಪ್ರಮುಖ ಸೂಚ್ಯಾಂಕಗಳಿಗೆ (Indicators) ತಮ್ಮ ಪ್ರಸ್ತುತ ಅಂಕಗಳನ್ನು ಗುರುತಿಸಿಕೊಂಡು, ದೀರ್ಘಕಾಲಿಕ ಗುರಿಗಳನ್ನು ನಿಗದಿಪಡಿಸಿ, ನಂತರ ಈ ದೀರ್ಘಕಾಲಿಕ ಗುರಿಗಳನ್ನು ಮಾಸಿಕ/ಅರ್ಧವಾರ್ಷಿಕ/ವಾರ್ಷಿಕ ಮೈಲುಗಲ್ಲುಗಳಾಗಿ (Targets) ವಿಭಜಿಸಿಕೊಂಡು ಇವುಗಳ ಸಾಧನೆಗೆ ನಿರ್ದಿಷ್ಠ ಕಾರ್ಯತಂತ್ರಗಳನ್ನು ರೂಪಿಸಿಕೊಂಡು ಜಾರಿಗೊಳಿಸುವುದು ಬಹಳ ಪ್ರಮುಖವಾಗಿದೆ.

ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಿಗೆ ಈ ಕೆಳಗಿನ ನಿರ್ದಿಷ್ಠ ಉದ್ದೇಶಗಳನ್ನು ನಿಗದಿ ಪಡಿಸಲಾಗಿದೆ:

**ಉದ್ದೇಶಗಳು:**

1. ಈ ಶಾಲೆಗಳ ಉದ್ದೇಶ ಪ್ರತಿ ತರಗತಿಯಲ್ಲಿನ ಎಲ್ಲಾ ವಿದ್ಯಾರ್ಥಿಗಳ ಪೈಕಿ 3/4 ವಿದ್ಯಾರ್ಥಿಗಳು ಅವರ ತರಗತಿಗೆ ನಿಗದಿಪಡಿಸಲಾದ ಕಲಿಕಾ ಸಾಮರ್ಥ್ಯಗಳ ಪೈಕಿ ಕನಿಷ್ಠ 3/4 ಕಲಿಕಾ ಸಾಮರ್ಥ್ಯಗಳನ್ನು ಸಾಧಿಸುವುದು ಮತ್ತು ಉಳಿದ 1/4 ವಿದ್ಯಾರ್ಥಿಗಳು ಕನಿಷ್ಠ 1/2 ದಷ್ಟು ಕಲಿಕಾ ಸಾಮರ್ಥ್ಯಗಳನ್ನು ಸಾಧಿಸುವುದು.

2. ಕಲಿಕಾ ಫಲಗಳ ಮೌಲ್ಯಮಾಪನಕ್ಕೆ ಒಂದು ವಿಶ್ವಾಸಾರ್ಹ (credible) ವ್ಯವಸ್ಥೆಯನ್ನು ರೂಪಿಸುವುದು.

**ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳ ಮಾರ್ಗದರ್ಶಿ ತತ್ವಗಳು :**

1.ಭಾರತದ ಸಂವಿಧಾನದಲ್ಲಿ ಸ್ಥಾಪಿತವಾದ ಮೌಲ್ಯಗಳು, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ 2009, ರಾಷ್ಟ್ರೀಯ ಶಿಕ್ಷಣ ನೀತಿ 1986/1992, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಮುಂತಾದವುಗಳ ಮಾರ್ಗಸೂಚಿ ಅಂಶಗಳು ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳ ಮಾರ್ಗದರ್ಶಿ ತತ್ವಗಳಾಗಿರುತ್ತವೆ.

2. **ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಸಂಬಂಧಿಸಿದ ಪ್ರತಿಯೊಬ್ಬ ಭಾಗೀದಾರರು ಈ ಕೆಳಗಿನ ಅಂಶಗಳಿಗೆ ಬದ್ಧರಾಗಿರತಕ್ಕದ್ದು:**

ಎ) ಪ್ರತಿಯೊಬ್ಬ ಮಾನವ ಜೀವಿಯ ವಿಶಿಷ್ಟ ಮೌಲ್ಯ ಮತ್ತು ಘನತೆಯನ್ನು ಗೌರವಿಸುವುದು-respect the unique value and dignity of each human being

ಬಿ) ವಿದ್ಯಾರ್ಥಿಗಳು, ತಮ್ಮ ಜೀವನದ ಮೇಲೆ ಪ್ರಭಾವ ಬೀರುವ ವಿಷಯಗಳ ಕುರಿತು ಚರ್ಚೆಗಳಲ್ಲಿ ಪ್ರಜಾತಾಂತ್ರಿಕ ರೀತಿಯಲ್ಲಿ ಮತ್ತು ಸಕ್ರಿಯವಾಗಿ ಭಾಗವಹಿಸುವರು-democratic participation and the active involvement of students in the issues that affect their lives through dialogue

ಸಿ) ಸಮತೆ ಮತ್ತು ನ್ಯಾಯ (equity and justice)

ಡಿ) ಮಕ್ಕಳ ಕಲಿಕೆಗಾಗಿ ಅವಕಾಶಗಳ ಸರಣಿಯನ್ನು ಒದಗಿಸುವುದು (providing a range of opportunities for learning)

**ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಗುಣಮಟ್ಟ ಸುಧಾರಣೆಗೆ ಕ್ರಮಗಳು:**

1.ಈ ಶಾಲೆಗಳು ಪೂರ್ವ ಪ್ರಾಥಮಿಕ ಹಂತದಿಂದ 12 ನೇ ತರಗತಿ ವರೆಗೆ ಶಿಕ್ಷಣ ಒದಗಿಸುವ ಸಮಗ್ರ ಶಾಲೆಗಳಾಗಿರುತ್ತವೆ. ಈ ಶಾಲೆಗೆ ಪ್ರಾಂಶುಪಾಲರು ಮುಖ್ಯಸ್ಥರಾಗಿರುತ್ತಾರೆ. ಈ ಶಾಲೆಯ ಎಲ್ಲ ಸಿಬ್ಬಂದಿ ಇಡೀ ಶಾಲೆಗೆ ಸಂಬಂಧಿಸಿದವರಾಗಿದ್ದು ಎಲ್ಲ ವಿಭಾಗಗಳಲ್ಲಿ ಅವಶ್ಯಕತೆಯನುಸಾರ ಕಾರ್ಯ ನಿರ್ವಹಿಸುತ್ತಾರೆ.

2. ಪ್ರತೀ ವಿದ್ಯಾರ್ಥಿಯ ಸಮಗ್ರ ಅಭಿವೃದ್ಧಿಗೆ ಆದ್ಯ ಗಮನವಿರಬೇಕು; ವ್ಯಕ್ತಿಗತ ಕಲಿಕೆಯ ವೇಗಕ್ಕೆ ತಕ್ಕಂತೆ ಬೋಧನೆ-ಕಲಿಕೆ ಪ್ರಕ್ರಿಯೆಯಲ್ಲಿ ನಮ್ಯತೆ (flexibility) ಇರಬೇಕು.

3. ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಒಳಗೊಂಡಂತೆ ಭಾಷೆಗಳ ಬೋಧನೆಗೆ ಹಾಗೂ ಗಣಿತ ವಿಷಯ ಬೋಧನೆಗೆ ವಿಶೇಷ ಗಮನವನ್ನು ನೀಡಲಾಗುವುದು.

4. ಎಲ್ಲ ಕರ್ನಾಟಕ ಪಬ್ಲಿಕ್ ಶಾಲೆಗಳು ಅವುಗಳ ಅಭಿವೃದ್ಧಿಗಾಗಿ ಸಮುದಾಯದೊಡನೆ ಕಾರ್ಯನಿರ್ವಹಿಸುತ್ತವೆ.

5. ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಲ್ಲಿ ವಿದ್ಯಾರ್ಥಿಯು ಈ ಶಾಲೆ ತನ್ನದೆಂದು ಒಪ್ಪುವ; ತನ್ನ ಸಾಮರ್ಥ್ಯ ವೃದ್ಧಿಯ ಕುರಿತು ಸ್ವಯಂ ಸವಾಲುಗಳನ್ನು ಹಾಕಿಕೊಳ್ಳುವ, ಸಂತೋಷವನ್ನು ಅನುಭವಿಸುವ, ತಾನು ಸುರಕ್ಷಿತ ಎಂದು ಭಾವನೆ ಬರುವ ಹಾಗೂ ತನಗೆ ನಿರಂತರ ಕಲಿಕೆಯ ಅವಕಾಶಗಳು ಇರುವ ಶಾಲೆ ಎನ್ನುವ ಕಾಣ್ಕೆ/ದೂರದೃಷ್ಟಿ ಹೊಂದಿರುವ ಶಾಲೆಗಳು ಎಂದು ಪರಿಕಲ್ಪಿಸಲಾಗಿದೆ.

**ಕರ್ನಾಟಕ ಪಬ್ಲಿಕ್ ಶಾಲೆಗಳ ಪೋರ್ಟಲ್ (KPS Portal) :**

ಎಲ್ಲ ಕರ್ನಾಟಕ ಪಬ್ಲಿಕ್ ಶಾಲೆಗಳು ತಮ್ಮ ಶಾಲೆಯ ಸಮಗ್ರ ಅಭಿವೃದ್ಧಿ ಯೋಜನೆಯನ್ನು ತಯಾರಿಸಲು ಅನುಕೂಲವಾಗಲು ಸ್ಕೂಲ್ ಎಜ್ಯುಕೇಶನ್ ಕರ್ನಾಟಕ ಅಂತರ್ಜಾಲ ತಾಣದಲ್ಲಿ ಒಂದು ವೆಬ್ ಪೋರ್ಟಲ್‌ನ್ನು ಅಳವಡಿಸಲಾಗಿದೆ. ಇಲ್ಲಿ ಕೆ.ಪಿ.ಎಸ್. ಗಳಿಗೆ ನೀಡಿದ ಸುತ್ತೋಲೆಗಳು, ಮಾರ್ಗಸೂಚಿ ಕೈಪಿಡಿಗಳು, ಇತರೆ ಸಂಬಂಧಿತ ಸಂಪನ್ಮೂಲಗಳನ್ನು ಅಳವಡಿಸಲಾಗಿದೆ. ಈ ಪೋರ್ಟಲ್‌ನಲ್ಲಿ ಶಾಲೆಯ ಸಮಗ್ರ ವಿವರಗಳನ್ನು ಅಳವಡಿಸಲು ಅವಕಾಶ ಒದಗಿಸಿ, ಅದರಲ್ಲಿಯೇ ನಿರ್ದಿಷ್ಠ ಯೋಜನೆ/ ಬೇಡಿಕೆ ಸೂಕ್ತ ವಿವರಣೆಗಳೊಂದಿಗೆ/ ಛಾಯಾ ಚಿತ್ರಗಳೊಂದಿಗೆ ದಾಖಲಿಸಲು ಸಾಧ್ಯವಿದೆ. ಇದರಲ್ಲಿ ಶಾಲೆಯ ಮುಖ್ಯಸ್ಥರು ಮತ್ತು ಇತರ ಅನುಷ್ಠಾನಾಧಿಕಾರಿಗಳು ಪ್ರಗತಿಯನ್ನು ವೀಕ್ಷಿಸಲು ಅವಕಾಶವಿದೆ, ಇದನ್ನು ಸರಿಯಾಗಿ ಭರ್ತಿ ಮಾಡಿದರೆ ಶಾಲೆಯ ಸಾಧನೆ, ಅವಶ್ಯಕತೆ ಮತ್ತು ನಿರ್ದಿಷ್ಠ ಯೋಜನೆಯು ಹೊರಹೊಮ್ಮುತ್ತದೆ, ಇದರ ಮುದ್ರಿತ ಪ್ರತಿಯನ್ನೂ ಪಡೆಯಬಹುದು. ಇದನ್ನು ಪಾಲಕರು, ಸಮುದಾಯ, ಇತರ ಇಲಾಖೆಗಳು ಮತ್ತು ದಾನಿಗಳ ಮುಂದೆ ಮಂಡಿಸಿ ನಿರ್ದಿಷ್ಠ ಅವಶ್ಯಕತೆಗಳಿಗೆ ಸಂಪನ್ಮೂಲ

ಕ್ರೋಡೀಕರಣ ಮಾಡಬಹುದು. ಒಂದು ಶಾಲೆಯವರು ಇನ್ನೊಂದು ಶಾಲೆಯವರು ಅಳವಡಿಸಿದ ಉತ್ತಮ ಅಂಶಗಳನ್ನು ವೀಕ್ಷಿಸಿ ಬಳಸಲು ಸಾಧ್ಯವಿದೆ. ಆದ್ದರಿಂದ ಎಲ್ಲ ಶಾಲೆಯವರೂ ಈ ಕುರಿತು ಆದ್ಯ ಗಮನವಿಟ್ಟು ಪೂರ್ತಿಗೊಳಿಸುವುದು ಅವಶ್ಯಕ.

**ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಶಾಲಾ ಹಂತದಲ್ಲಿ ಕೈಗೊಳ್ಳಬೇಕಾದ ಕೆಲವು ಪ್ರಮುಖ ಕ್ರಮಗಳು:**

**1**. ಕರ್ನಾಟಕ ಪಬ್ಲಿಕ್ ಶಾಲೆಗಳ ಎಲ್ಲ ಹಂತದ ಸಿಬ್ಬಂದಿ ಹಾಗೂ ಶಿಕ್ಷಕರ ಸಭೆಗಳನ್ನು ಶಾಲಾಮುಖ್ಯಸ್ಥರು ಕರೆದು ಈ ಶಾಲೆಗಳ ಧ್ಯೇಯ, ಉದ್ದೇಶ, ವೈಶಿಷ್ಟ್ಯತೆ ಮುಂತಾದವುಗಳನ್ನು ಪರಿಚಯಿಸುವುದು. ನಿಗದಿತ ಗುರಿಗಳ ತುಲನೆಯಲ್ಲಿ ಪ್ರಸ್ತುತ ಶಾಲೆಯು ವಿವಿಧ ಸೂಚಕಗಳಲ್ಲಿ ಯಾವ ಹಂತದಲ್ಲಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು. ಮುಂದೆ ಗುರಿ ಸಾಧನೆಗಾಗಿ ಬೋಧನೆ–ಕಲಿಕೆ ಪ್ರಕ್ರಿಯೆ, ಮೂಲಭೂತ ಸೌಕರ್ಯ ಮತ್ತು ಶಾಲೆಯ ಆಡಳಿತ ಮತ್ತು ನಿರ್ವಹಣೆಯಲ್ಲಿ ಯಾವ ಬದಲಾವಣೆಗಳನ್ನು ತರಬೇಕು ಎಂಬುದನ್ನು ನಿರ್ಧರಿಸುವುದು. ತಮ್ಮ ಕೆ.ಪಿ.ಎಸ್. ಉತ್ಕೃಷ್ಟತೆಯ ಕೇಂದ್ರವಾಗಿ (Centers of Excellence) ಹೊರಹೊಮ್ಮಿದಾಗ ಯಾವ ರೀತಿ ಇರುತ್ತದೆ ಎಂಬುದನ್ನು ಕಲ್ಪನೆ ಮಾಡಲು ತಿಳಿಸಿ ಒಂದು ಕಾಣ್ಕೆ (Vision) ಹೊರಹೊಮ್ಮಿಸುವುದು.

2. ಕೆ.ಪಿ.ಎಸ್.ಗಳ ಪರಿಣಾಮಕಾರಿ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ದೃಷ್ಟಿಯಿಂದ ಶಾಲಾ ನಿರ್ದಿಷ್ಟಿತ ಯೋಜನೆಯನ್ನು ತಯಾರಿಸುವುದು ಪ್ರಥಮ ಆದ್ಯತೆಯ ಕಾರ್ಯವಾಗಿದೆ. ತಾತ್ವಿಕ ಹಾಗೂ ವೈಜ್ಞಾನಿಕ ವಿಧಾನವನ್ನು ಬಳಸಿ ತಯಾರಿಸಿದ ಸಮಗ್ರ ಶಾಲಾಭಿವೃದ್ಧಿ ಯೋಜನೆಯು ಆಯಾ ಸಂಸ್ಥೆಗಳ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಒಂದು ಶಾಲೆಯ ಗುಣಮಟ್ಟವು ಬಹು ಮುಖ್ಯವಾಗಿ ಆ ಶಾಲೆಯ ಮುಖ್ಯಸ್ಥರು, ಶಿಕ್ಷಕರು ಮತ್ತು ಇತರೆ ಸಿಬ್ಬಂದಿಯು ಆ ಶಾಲೆಯ ಬೋಧನಾ ಕಲಿಕಾ ಪ್ರಕ್ರಿಯೆ, ವಿದ್ಯಾರ್ಥಿಗಳಿಗೆ ಒದಗಿಸುವ ಪ್ರೇರಣೆ, ಸಂಸ್ಥೆಯ ಆಡಳಿತಾತ್ಮಕ & ಶೈಕ್ಷಣಿಕ ಚಟುವಟಿಕೆಗಳು, ಪಠ್ಯ ಹಾಗೂ ಪಠ್ಯಪೂರಕ ಕಾರ್ಯಕ್ರಮಗಳು ಮುಂತಾದವುಗಳನ್ನು ನಿರ್ವಹಿಸುವ ರೀತಿಯ ಮೇಲೆ ಅವಲಂಬಿತವಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ನಿರಂತರವಾಗಿ ಮತ್ತು ಉತ್ತಮವಾಗಿ ನಿರ್ವಹಿಸಿ, ದೂರದೃಷ್ಟಿಯುಳ್ಳ ದೀರ್ಘಕಾಲಿಕ ಗುರಿಗಳನ್ನು ಹೊಂದಿ ಕೆ.ಪಿ.ಎಸ್.ಗಳನ್ನು ಉತ್ಕೃಷ್ಟತೆಯ ಕೇಂದ್ರಗಳಾಗಿ (Centers of Excellence) ರೂಪಿಸಬೇಕಾಗಿದೆ. ಆದ್ದರಿಂದ ಪ್ರತಿಯೊಂದು ಸಂಸ್ಥೆಯು ಭಾಗೀದಾರರ ಪಾಲ್ಗೊಳ್ಳುವಿಕೆ ಯಿಂದ ತನ್ನಲ್ಲಿ ಇರುವ ಭೌತಿಕ ಹಾಗೂ ಮಾನವ ಸಂಪನ್ಮೂಲ ಆಧರಿಸಿ, ತನ್ನದೇ ಆದ ನಿರ್ದಿಷ್ಟಿತ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿ, ಅನುಷ್ಠಾನಿಸಿ ಮೇಲಿಂದ ಮೇಲೆ ಮೌಲ್ಯಮಾಪನಕ್ಕೆ ಒಳಪಡಿಸುವ ಅಗತ್ಯವಿದೆ.

**3**. ಕೆ.ಪಿ.ಎಸ್. ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ (Infrastructure Development Master Plan)– ಮೂಲಭೂತ ಸೌಕರ್ಯ ಅಭಿವೃದ್ಧಿ ಬೃಹತ್ ಯೋಜನೆ ಪ್ರಮುಖ ಅಂಶವಾಗಿರುತ್ತದೆ. ಈ ನಿಟ್ಟಿನಲ್ಲಿ ಶಾಲೆಯ ಪ್ರಸ್ತುತ ನಿವೇಶನ, ದಾಖಲಾತಿ ಸಂಖ್ಯೆ, ಪ್ರಸ್ತುತ ಸೌಲಭ್ಯಗಳು, ಅವಶ್ಯಕತೆ, ಕೊರತೆ ಮುಂತಾದವುಗಳನ್ನು ಗಣನೆಗೆ ತೆಗೆದುಕೊಂಡು ಕೆ.ಪಿ.ಎಸ್. ಮುಂದಿನ ದಿನಗಳಲ್ಲಿ ಎಲ್ಲ ರೀತಿಯ ಸೌಲಭ್ಯಗಳನ್ನು ಹೊಂದಿರುವ, ಆಕರ್ಷಕ ವಿನ್ಯಾಸವಿರುವ ಶಾಲೆಯನ್ನಾಗಿ ಪರಿವರ್ತಿಸುವುದು ಅವಶ್ಯವಿದೆ. ಈ ನಿಟ್ಟಿನಲ್ಲಿ ಮಾರ್ಗಸೂಚಿಗಳಲ್ಲಿ ತಿಳಿಸಿರುವಂತಹ ಸೌಲಭ್ಯಗಳನ್ನುಳ್ಳಂತಹ ಶಾಲೆಯಾಗಿ ಪರಿವರ್ತಿಸಲು ಪ್ರಸ್ತುತ ಇರುವ ಕಟ್ಟಡಗಳ ಸ್ಥಿರತೆ ಕುರಿತು ಹಾಗೂ ಈ ಕಟ್ಟಡಗಳಲ್ಲಿ ಮೇಲ್ಮುಖ ವಿಸ್ತರಣೆಯ (Vertical Expansion) ಸಾಧ್ಯತೆಗಳ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ ಪ್ರಮಾಣ ಪತ್ರ ಪಡೆಯುವುದು. ಅಸ್ಥಿರ ಕಟ್ಟಡಗಳನ್ನು ನೆಲಸಮ ಮಾಡಿಸುವುದು ಹಾಗೂ ಮೇಲ್ಮುಖ ವಿಸ್ತರಣೆ ಮಾಡುವ ಸಾಧ್ಯತೆಗಳನ್ನು ಪರಿಗಣಿಸುವುದು. ಒಟ್ಟು ನಿವೇಶನದ Total Station Survey ಮಾಡಿಸಿ, ವಾಸ್ತುಶಿಲ್ಪ ತಜ್ಞರಿಂದ ಮಾಸ್ಟರ್ ಪ್ಲ್ಯಾನ್ ತಯಾರಿಸುವುದು.

**4. ಕೆ.ಪಿ.ಎಸ್. ಶೈಕ್ಷಣಿಕ ಮಟ್ಟ ಸುಧಾರಣೆ ಯೋಜನೆ:**

ಪ್ರಸ್ತುತ 2019–20 ನೇ ಶೈಕ್ಷಣಿಕ ಸಾಲಿನ ತರಗತಿಗಳು ಪ್ರಾರಂಭವಾಗುತ್ತಲಿವೆ ಕಳೆದ ವರ್ಷದ ತರಗತಿವಾರು, ವಿಷಯವಾರು, ವಿದ್ಯಾರ್ಥಿವಾರು ಫಲಿತಾಂಶ ಹಾಗೂ ಇಲಾಖೆ/ವಿವಿಧ ಸಂಸ್ಥೆಗಳು ನಡೆಸುವ ಮಕ್ಕಳ ಮೌಲ್ಯಾಂಕನಗಳನ್ನು ಆಧರಿಸಿ: CSAS, NAS, ಓದು ಕರ್ನಾಟಕ, ಗಣಿತ ಕಲಿಕಾ ಆಂದೋಲನ, ಪ್ರೇರಣಾ, ಇತ್ಯಾದಿಗಳ ಆಧಾರದ ಮೇಲೆ, ಪ್ರತಿಯೊಬ್ಬ ಶಿಕ್ಷಕರು ಮಕ್ಕಳ ವಾಸ್ತವಿಕ ಶೈಕ್ಷಣಿಕ ಮಟ್ಟದ ಸುಧಾರಣೆ ಯೋಜನೆಯನ್ನು ತಯಾರಿಸಿ, ವೆಬ್‌ಪೋರ್ಟಲ್‌ನಲ್ಲಿ ನಮೂದಿಸಿ ಕಾರ್ಯಾರಂಭಿಸಲು ಸೂಕ್ತ ಸಮಯವಾಗಿದೆ.

**ಕೆಪಿಎಸ್ ಗಳಿಗೆ ಜಿಲ್ಲಾ ಮಟ್ಟದಲ್ಲಿ ನೀಡಬೇಕಾದ ಅವಶ್ಯ ಬೆಂಬಲ:**

ಕರ್ನಾಟಕ ಪಬ್ಲಿಕ್ ಶಾಲೆಗಳೆಲ್ಲಾ ಸರ್ಕಾರದ ನಿರೀಕ್ಷೆಯಂತೆ ಉತ್ಕೃಷ್ಟತೆಯ ಕೇಂದ್ರಗಳಾಗಿ ಹೊರಹೊಮ್ಮಲು ಜಿಲ್ಲಾಮಟ್ಟದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು(ಆಡಳಿತ), ಡಯಟ್‌ನ ಪ್ರಾಂಶುಪಾಲರು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ ಈ ಶಾಲೆಗಳಿಗೆ ಎಲ್ಲ ರೀತಿಯ ಬೆಂಬಲ/ಪ್ರೋತ್ಸಾಹ ನೀಡುವುದು. ಈಗಾಗಲೇ ಪ್ರತಿ ಜಿಲ್ಲೆಯಲ್ಲಿ ಕೆ.ಪಿ.ಎಸ್. ಜಿಲ್ಲಾ ನೋಡಲ್ ಅಧಿಕಾರಿಗಳನ್ನು ಗುರುತಿಸಲಾಗಿದ್ದು ಅವರು ಜಿಲ್ಲೆಯ ಎಲ್ಲಾ ಶಾಲೆಗಳಿಗೆ ಡಯಟ್‌ನಿಂದ ನಿಯುಕ್ತಿಗೊಳಿಸಲಾದ ಬ್ಲಾಕ್/ಕೆ.ಪಿ.ಎಸ್. ಹಂತದ ನೋಡಲ್ ಅಧಿಕಾರಿಗಳ ಸಹಾಯದಿಂದ ಕೆ.ಪಿ.ಎಸ್.ಗಳಿಗೆ ಸಂದರ್ಶನ ಮಾಡಿ ಮಾರ್ಗದರ್ಶನ ಹಾಗೂ ಬೆಂಬಲ ನೀಡುವುದು.

ಒಟ್ಟಾರೆ ಸಂಬಂಧಿಸಿದ ಎಲ್ಲರೂ ಪ್ರಮುಖವಾಗಿ ಕೆಪಿಎಸ್ ನ ಎಲ್ಲ ಸಿಬ್ಬಂದಿ ಮತ್ತು ಸಮುದಾಯದ ಸಹಾಯದೊಡನೆ ಈ ಕನಸನ್ನು ಸಾಕಾರಗೊಳಿಸಬೇಕಾಗಿದೆ.

**(ಪುಟ 35 ರಿಂದ ಕೆಲವು ಉತ್ತಮ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳ ವಿವರಗಳನ್ನು ನೀಡಲಾಗಿದೆ.)**